13th Annual Report of the Karnataka land Army Corporation Limited, Bangalore for the year 1986-87 as required under section 619(A) of the Companies Act, 1956.

III. Sri M.Veerappa Moily (Minister for Education & Parliamentary Affairs): Sir, I will lay the following papers on the table of the House.

Annual Administration Report of the Karnataka Secondary Education Examination Board for the year 1989-90

as required under Sub-section(3) of Section 25 of the Karnataka Secondary Education Examination Board Act, 1966.

Mr. Speaker : Papers laid

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಕಳಿಹಿತ್ತಲಿಯಲ್ಲಿ ಕಾಲು ಸಂಕದ ನಿರ್ಮಾಣದ ಹಾಗೂ ಸಮುದ್ರ ಕೊರೆತ ತಡೆಗೋಡೆಯನ್ನು ಕಟ್ಟುವ ಬಗ್ಗೆ ಗ್ರಾಮಸ್ಥರು ಸಲ್ಲಿಸಿರುವ ಅರ್ಜಿಯನ್ನು ತಮ್ಮ ಮುಖಾಂತರ ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಅರ್ಜಿಯನ್ನು ಒಪ್ಪಿಸಲಾಗಿದೆ.

ನಿಲುವಳಿ ಸೂಚನೆ

(ಮಂಡನೆಗೆ ಅನುಮತಿ ಕೋರಿಕೆ)

ತುಂಗಭದ್ರ ಎಡದಂಡೆ ಕಾಲುವೆಯನ್ನು ಮುಚ್ಚುವ ಬಗ್ಗೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆ. ಕಾರಣ ಏನೆಂದರೆ ತುಂಗಭದ್ರಾ ಪ್ರಾಜೆಕ್ಟ್‌ನ ಎಡದಂಡೆ ಕಾಲುವೆಯನ್ನು ಈ ತಿಂಗಳ 31ಕ್ಕೆ ಮುಚ್ಚುವುದಾಗಿ ಸಂಬಂಧಪಟ್ಟ ಇಲಾಖೆಯವರು ಹೇಳಿದ್ದಾರೆ. ಸುತ್ತೋಲೆ ಮೂಲಕ ಗಮನ ಸೆಳೆದಿದ್ದಾರೆ. ಇಂತಹ ಪ್ರಶ್ನೆ ಪ್ರತಿವರ್ಷ ಬರುತ್ತದೆ. ವಿಶೇಷವಾಗಿ ತುಂಗಭದ್ರಾ ಜಲಾಶಯದ ಎಡದಂಡೆ ಕಾಲುವೆಯಲ್ಲಿ ಪ್ರತಿ ವರ್ಷ ಬರುತ್ತದೆ. ಕಳೆದ ಬಾರಿ ಇಂತಹ ಪ್ರಶ್ನೆ ಬಂದಾಗ ಈ ಸಾರಿ ಬಂದ ನೀರಿಗಿಂತ ಕಡಿಮೆ ನೀರು ಬಂದಿದ್ದರೂ ಕೂಡಾ ಏಪ್ರಿಲ್ 8ನೇ ತಾರೀಖಿನವರೆಗೆ ಕಾಲುವೆಯನ್ನು ಮುಂದುವರಿಸಿದ್ದರು. ಈ ಸಾರಿ 31ಕ್ಕೇ ಮುಚ್ಚಬೇಕೆನ್ನತಕ್ಕಂಥ ವಿಚಾರ ಇದೆ. ಸಾವಿರಾರು ಎಕರೆ ಪ್ರದೇಶದಲ್ಲಿ ಈಗಾಗಲೇ ಭತ್ತ ಹಾಕಿದ್ದಾರೆ. ಇನ್ನೇನು ಮಾತೆ ಹೊರಡತಕ್ಕಂಥ ಕಾಲ. ಆದುದರಿಂದ ಈಗ ನೀರನ್ನು ನಿಲ್ಲಿಸಿಬಿಟ್ಟರೆ ಸಾವಿರಾರು ಎಕರೆಯಲ್ಲಿ ಬೆಳೆದಿರತಕ್ಕಂಥ ಭತ್ತ ಒಣಗಿ ಹೋಗುತ್ತದೆ. ಮತ್ತು ನೂರಾರು ಕೋಟಿ ರೂಪಾಯಿಗಳು ಲುಕ್ಸಾನಾಗುತ್ತದೆ.

ಮಾನ್ಯ ಅಧ್ಯಕ್ಷರೇ ನಾನು ನನ್ನಲ್ಲಿರತಕ್ಕಂಥ ಮಾಹಿತಿಯನ್ನು ಕೊಡುವುದಕ್ಕೆ ತಾವು ಅನುಮತಿ ಕೊಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಕಳೆದ ಸಾರಿ ಕರ್ನಾಟಕದಲ್ಲಿ 73.444 ಟಿ.ಎಂ.ಸಿ ನೀರನ್ನು ಎಡದಂಡೆ ನಾಲೆಗೆ ಬಿಡುವುದಕ್ಕೆ ಕರ್ನಾಟಕ ರಾಜ್ಯಕ್ಕೆ ಬಚಾವತ್ ಅವಾರ್ಡ್‌ನಿಂದ ನಮಗೆ ಬಂದಿರತಕ್ಕಂಥ ಭಾಗ. ಈಗ ಈ ವರ್ಷ ಬಂದಿರತಕ್ಕಂಥಾದ್ದನ್ನು ನಾನು ನೋಡಿದ್ದೇನೆ. ಅಲ್ಲೂ ಕೂಡ ಸುಮಾರು 74.013 1990-91ಕ್ಕೆ ಎಸ್ಟ್ಯಿಟಲ್‌ಮೆಂಟ್ ಬರುತ್ತದೆ. ಈ ಸಾರಿ ಅವರು ಒದಗಿಸಿರತಕ್ಕಂಥ